ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಶುಕ್ರವಾರ, ದಿನಾಂಕ : 06 ನೇ ಮಾರ್ಚ್, 2020

B.R.C./C.R.C. ಸೇವೆಯನ್ನು ಮುಂದುವರೆಸುವ ಬಗ್ಗೆ

ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :-

057 (460) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) 2011-12ನೇ ಸಾಲಿನಲ್ಲಿ NRDWP ಯೋಜನೆಯಡಿ ಕಾರ್ಯನಿರ್ವಸುತ್ತಿದ್ದ B.R.C./C.R.C. ಗಳನ್ನು ಯಥಾವತ್ತು ಮುಂದುವರೆಸುವ ಸಂಬಂಧ ಕಡತ ಸಂಖ್ಯೆ: ಗ್ರಾಆಪ 69 ಗ್ರಾನಿಸ (2) 2015 ಕಂಡಿಕೆ 43,44,45 ಮತ್ತು 74ರಲ್ಲಿ ಸರ್ಕಾರ ಮಾಡಿರುವ ಆದೇಶವೇನು ; (ವಿವರವಾದ ಮಾಹಿತಿ ನೀಡುವುದು)

(ಆ) ಸರ್ಕಾರದ ನಿರ್ಣಯದಂತೆ ಸರ್ಕಾರಿ ಆದೇಶ ಹೊರಡಿಸದೆ ಇರಲು ಕಾರಣಗಳೇನು;

(ಇ) ಇದರ ಸಂಬಂಧ ವಿಧಾನ ಪರಿಷತ್ತಿನ ಅರ್ಜಿ ಸಮಿತಿಯ ಸರ್ವಾನುಮತದ ನಿರ್ಣಯ ಸರ್ಕಾರಕ್ಕೆ ಕಳುಹಿಸಿದ್ದರೂ ಸಹ ಸದರಿ ನಿರ್ಣಯವನ್ನು ಅನುಷ್ಠಾನಗೊಳಿಸದಿರಲು ಕಾರಣಗಳೇನು ;

(ಈ) B.R.C./C.R.C. ಗಳ ನೇಮಕಾತಿ ಮಾರ್ಗಸೂಚಿಗಳನ್ನು ತಿದ್ದುಪಡಿ/ ಮಾರ್ಪಾಡು ಮಾಡಲು ಯಾರಿಗೆ ಅಧಿಕಾರ ನೀಡಲಾಗಿದೆ ; (ವಿವರವಾದ ಮಾಹಿತಿ ನೀಡುವುದು)

(ಉ) ಮಾರ್ಗಸೂಚಿಗಳಲ್ಲಿ B.R.C./C.R.C. ಗಳ ನೇಮಕಾತಿ ಆಯ್ಕೆ ಪ್ರಕ್ರಿಯ ಹಾಗೂ ಅವಧಿ ಇವುಗಳ ವಿಚಾರಗಳಲ್ಲಿ ರಾಜ್ಯ ಸರ್ಕಾರಕ್ಕೆ ಅಧಿಕಾರ ಕೊಟ್ಟಿರುವುದು ನಿಜವೇ ;

(ಊ) ಹಾಗಿದ್ದಲ್ಲಿ, ಸರ್ಕಾರದ ನಿರ್ಣಯ, ವಿಧಾನ ಪರಿಷತ್ತಿನ ಅರ್ಜಿ ಸಮಿತಿ ನಿರ್ಣಯ ಮತ್ತು ನ್ಯಾಯಾಲಯದ ಆದೇಶಗಳನ್ನು ಪಾಲನೆ ಮಾಡದಿರಲು ಕಾರಣಗಳೇನು ;

(ಋ) ಇದರ ಸಂಬಂಧ ಸರ್ಕಾರದ ನಿಲುವೇನು ; ಸರ್ಕಾರಿ ಆದೇಶವನ್ನು ಯಾವ ಕಾಲ ಮಿತಿಯೊಳಗೆ ಹೊರಡಿಸಲಾಗುವುದು ? (ವಿವರವಾದ ಮಾಹಿತಿ ನೀಡುವುದು)